# ಕಿಸೀಲಿಲ್ಲ ಮಸೀಲಿಲ್ಲ, ಕುಸೂಗಲ್ ಹಾಳಾಗಿತ್ತಂತ್!

ನನ್ನ ಅವ್ವನ ತವರ್ಮನಿ ಧಾರ್ವಾಡ್ ಜಿಲ್ಲಾ, ಹುಬ್ಬಳ್ಳಿ ತಾಲೂಕಿನ ಕುಸೂಗಲ್ಲು. ಅದಽ ಊರಿನ ನಮ್ಮ ಮಾವನ ಮಗನಿಗೆ ನಮ್ಮ ಅಕ್ಕನ್ನೂ ಮದವಿ ಮಾಡಿ ಕೊಟ್ಟೇವಿ. ಅವ್ವನ ತವರ್ಮನಿ ಆಗಿದ್ರಿಂದ ಸಣ್ಣಾವಿದ್ದಾಗ ಸಾಲಿ ಸೂಟೀ ಬಿಟ್ರೂ ಅಂದ್ರ ಓಡೋಡಿ ಆ ಊರೀಗೇ ಹೊಕ್ಕಿದ್ಯಾ. ಹಿಂಗಾಗಿ ಆ ಊರಿನ ಕೂಡ ನನಗೆ ಮೊದ್ಲಿಂದನೂ ಬಾಳ್ ಹೊಕ್ಕೂಬಳಿಕಿ ಸಂಬಂಧಾ. ಇನ್ನೂ ಮುಂದ್ ಹೋಗಿ ಹೇಳೂದಾದ್ರ, ನಾನೂ ಅದಽ ಊರಿನ ಹುಡ್ಗೀನಽ ಮದವ್ಯಾಗೇನಿ. ಇಷ್ಟೂ ಸಾಲ್ದೂ ಅನ್ನೂವಂಗ್ ನನ್ನ ಇಬ್ರೂ ಹೆಣ್ಮಕ್ಳು ಹುಟ್ಟಿದ್ದೂ ಕುಸೂಗಲ್ಲಿನ್ಯಾಗಽ. 'ಅರೇ, ಇದೇನಪಾ, ಇಡೇ ಕುಸೂಗಲ್ ಊರ್ನಽ ನೀ ಒಬ್ನಽ ದಕೂತಿ ತೊಗೊಂಡೀಯೇನು?' ಅಂತ ಯಾರಾದ್ರೂ ಕೇಳಬೌದು. ಇನ್ನಷ್ಟ್ ಮಂದಿ, 'ಅಲ್ಲೋ ತಮ್ಮಾ, ಕುಸೂಗಲ್ಲಂದ್ರ ನಿನಗ್ಯಾಕ ಅಷ್ಟೊಂದು ಕಳ್ಳು ಕಕ್ಕುಲಾತಿ?' ಅಂತ ಪ್ರಶ್ನೆನೂ ಮಾಡಬೌದು. ದಕ್ಕೂ ಇಲ್ಲ, ಕಳ್ಳುಕಕ್ಕುಲಾತೀನೂ ಇಲ್ಲ, ಇದೆಲ್ಲಾ ಒಂದ್ನಮೂನಿ ಠೋಕ್ ಹಿಡದವ್ರ ಗತಿ ಅನುಕೂಲಕ್ಕ ತಕ್ಕಂಗ್ ಆಗಿದ್ದರ ಪರಿಣಾಮ ಅಂತ ಮಾತ್ರ ಹೇಳಬೌದು. ಹಂ, ಹೋಗ್ಲಿ ಬಿಡ್ರಿ, ಈ ಕಳ್ಳು ಕಕ್ಕುಲಾತಿ ಕತೀ ಏನರಽ ಇರ್ಲಿ, ಅದನ್ನ ತೊಗೊಂಡು ಮಾಡೂದರಽ ಏನೈತೀಗ? ಹೆಂಗೆಂಗ್ಯೋ ಆಗಿ ಹೋಗಿರೋ ಅದನ್ನ ಈಗ ನೆನಸ್ಕೊಂಡ್ರ ಆಗೂದರಽ ಏನು? ಅದನ್ನ ಈಗೇನರ ಬಿಡಸ್ಕೊಳ್ಳಾಕ್ ಅಕ್ಕೈತ್ಯಾ? ಆಗೂ ಮಾತೂ ಅಲ್ಲ ಬಿಡ್ರಿ ಅದು.

ನಾನೀಗ ಹೇಳಾಕ್ ಹೊಂಟೇರೋದು ಸಂಬಂಧಗೋಳ ಆ ಪುರಾಣದ ಕತೀ ಅಲ್ಲ, ನನಗದು ಇಲ್ಲೆ ಮುಖ್ಯನೂ ಅಲ್ಲ. ಈ ಕುಸೂಗಲ್ಲ ಊರ ಹೆಸರಿನ ಕೂಡ ಗಂಟ್ ಹಾಕ್ಕೊಂಡಿರೂವಂಥಾ ಒಂದು 'ಗಾದಿ' ಮಾತು ಬಾಳ ದಿನದಿಂದ ನನ್ನ ತೆಲೀ ತಿನ್ನಾಕ ಹತ್ತಿರೂದ್ರಿಂದ, ಅದನ್ನ ನಿಮ್ಮ ಕೂಡ ಹಂಚ್ಕೋಬೇಕನ್ನೂದು ನಂದಿಲ್ಲೆ ಮುಖ್ಯ ಉದ್ದೇಶ. ಆ ಕಾರಣಕ್ಕಽ ಇಷ್ಟೆಲ್ಲಾ ಹಿಂಗತಿ ಹೇಳ್ಬೇಕಾತು. ಯಾಕಂದ್ರ, ಈ ಗಾದಿ ಮಾತ್ನ ನಾನು ಸಣ್ಣಾವಿದ್ದಾಗಿಂದನೂ ಕೇಳ್ಕೊಂತಽ ಬಂದೇನಿ. ಅಷ್ಟಽ ಅಲ್ಲ, ಇದು ನಮ್ಮ ಉತ್ತರ ಕರ್ನಾಟಕದ ಮನೀ ಮನಿಯೊಳಗೂ ಚಾಲ್ತಿ ಐತಿ. ಮೂರ್ ಹೊತ್ತೂ ಮೊಬೈಲ್ ತಿಕ್ಕೊಂತ ಎಲ್ಲಾ ಮರ್ತ್ಯಾಕತ್ತಿರೋ ಐಲೀ ಕಡೆ ಹುಡಗೂರ್ಗೆ ಇದು ಗೊತ್ತ್ ಇರ್ಲಿಕ್ಕಿಲ್ಲಾದ್ರೂ, ಹಳೇ ಮಂದಿ ಮಾತ್ರ ಅದನ್ನ ಮರ್ತ್ಯಾಕ ಸಾಧ್ಯನಽ ಇಲ್ಲ. ಆದ್ರ, ಹಿಂಗ್ ಚಾಲ್ತಿಯೊಳಗಿದ್ರೂ ಈ ಗಾದೀ ಮಾತಿನ ಖರೇ ಅರ್ಥ ಏನನ್ನೂದು ಮಾತ್ರ ಬಾಳ ಮಂದೀಗೆ ತಿಳದಿಲ್ಲ. ನನಗಂತೂ ಮದ್ಲಽ ಗೊತ್ತಿರಲಿಲ್ಲ ಬಿಡ್ರಿ! ಅರೆ, ಹಂತಾ ಗಾದಿ ಮಾತು ಯಾವ್ದಪಾ ಅಂತೀರೆನು? ಅದು, 'ಕಿಸೀಲಿಲ್ಲ ಮಸೀಲಿಲ್ಲ, ಕುಸೂಗಲ್ ಹಾಳಾಗಿತ್ತಂತ' ಅನ್ನೂದು. ಕೇಳಿದ್ರೆಲ್ಲ, ಇದರಾಗ ಕುಸೂಗಲ್ಲ ಐತ್ಯೋ ಇಲ್ಲೋ, ನೀವಽ ಹೇಳ್ರಿ.

ಎಲ್ಲಾ ಬಿಟ್ಟು ಈಗ್ಯಾಕ್ ನೆನಪಾತಪಾ ಈ ಗಾದಿ ಮಾತು ನಿನಗ? ಅಂತ ನೀವ್ಯಾರಾದ್ರೂ ಸಹಜವಾಗೇ ಕೇಳಬೌದು. ಅದೊಂದ್ ಸರ್ತೆ ಏನಾತಪಾ ಅಂತಂದ್ರ, ಕನ್ನಡದ ಕಟ್ಟಾಳು ಡಾ. ಪಾಟೀಲ ಪುಟ್ಟಪ್ಪ ಅವರ ಕೂಡ, ಕಾರ್ಯಕ್ರಮಕ್ಕಂತ ನರಗುಂದಕ್ಕೆ ಹೊಂಟಿದ್ವಿ. ನಮ್ಮ ಕಾರು ಈ ಕುಸೂಗಲ್ ಬಾಜೂನಽ ಹಾದು ಹೊಂಟಾಗ, ಅವರ್ಗೆ ಸಟಕ್ನ ಆ ಗಾದಿ ಮಾತು ನೆನಪಾಗಿ, "ಸಾದರ್ ಅವ್ರೆ, 'ಕಿಸೀಲಿಲ್ಲ ಮಸೀಲಿಲ್ಲ ಕುಸೂಗಲ್ಲು ಹಾಳಾಗಿತ್ತಂತ' ಅಂತಾರಲ್ಲಾ, ಈ ಗಾದೆ ಮಾತಿನ ಅರ್ಥಾ ಏನು ಅಂತ ನಿಮಗ ಗೊತ್ತಾ?" ಅಂತ ತಮ್ಮ ಖರ್ಜ್ ದನಿಯೊಳಗ

> 'ಕನ್ನಡದ ಕಟ್ಟಾಳು ಡಾ. ಪಾಟೀಲ ಪುಟ್ಟಪ್ಪ ಅವರ ಕೂಡ ಕಾರ್ಯಕ್ರಮಕ್ಕಂತ ಹೋಗುವಾಗ ಅವರ್ಗೆ ಸಟಕ್ನ 'ಕಿಸೀಲಿಲ್ಲ ಮಸೀಲಿಲ್ಲ, ಕುಸೂಗಲ್ ಹಾಳಾಗಿತ್ತಂತ್!' ಗಾದಿ ಮಾತು ನೆನಪಾಗಿ, ಈ ಗಾದೆ ಮಾತಿನ ಖರೇ ಖರೇ ಅರ್ಥ ಏನು ಅನ್ನೋದನ್ನ ಬಿಡಿಸಿ ಬಿಡಿಸಿ ಹೇಳಿದ್ರು. ಆದನ್ನ ಕೇಳಿದಾಗ ನಾನು ಕಕ್ಕಾಬಿಕ್ಕೀ ಆಗಿ ಹೋಗಿದ್ವ್ಯ!...'

■ ಬಸವರಾಜ ಸಾದರ

ಧಾರವಾಡ ಭಾಷೆಯಲ್ಲಿ ಗಾದೆಯ ವೃತ್ತಾಂತ

